# ಕನ್ನಡದ ಇಂಪು ಮತ್ತು ಕಂಪು

ನಮಗೆ ಪರಿಚಿತವಿರುವ ಯಾವುದೇ ಭಾಷೆಯನ್ನು ಕೇಳಿದ ಇಲ್ಲವೇ ಓದಿದ ಮರುಕ್ಷಣ ನಮ್ಮ ಗಮನಕ್ಕೆ ಬರುವುದು ಅದರ ಲಯ, ಛಂದಸ್ಸು. ಮೊದಲಿಗೆ ಇವು ನಮ್ಮನ್ನು ಸೆಳೆದು ತಮ್ಮ ತೆಕ್ಕೆಗೆ ಹಾಕಿಕೊಳ್ಳುತ್ತವೆ. ಹಾಗೆ ಆಕರ್ಷಿಸುವುದರ ಹಿಂದಿರುವುದು ಭಾಷೆಯ ಸೊಗಡು ಅಥವಾ ದನಿ–ಬನಿ. ಕೊಂಕಣಿಗರು, ತುಳುವರು, ಮಲಯಾಳಿಗಳು, ತಮಿಳರು, ತೆಲುಗರು ಅಥವಾ ಯಾವುದೇ ಭಾಷಿಕರು ತಮ್ಮ ಭಾಷೆಯವರು ಸಿಕ್ಕಾಗ ಅಯಸ್ಕಾಂತದಂತೆ ಒಬ್ಬರಿಗೊಬ್ಬರು ಅಂಟಿಕೊಳ್ಳುವುದು, ಆಕರ್ಷಿತರಾಗುವುದು ಇದೇ ಕಾರಣಕ್ಕೆ.

ಕಿವಿ ಮೇಲೆ ಬಿದ್ದಾಗಲೆಲ್ಲ ಉಲ್ಲಾಸಗೊಳ್ಳುವಂತೆ ಮಾಡುವುದು ಕೂಡ ಭಾಷೆಯಲ್ಲಿನ ಈ ಸೊಗಡೇ. ಕಾಳಿಂಗರಾವ್, ಭೀಮಸೇನ ಜೋಶಿ, ಮೈಸೂರು ಅನಂತಸ್ವಾಮಿ, ರಾಜಕುಮಾರ್, ಎಸ್.ಪಿ. ಬಾಲಸುಬ್ರಹ್ಮಣ್ಯಂ, ರತ್ನಮಾಲಾ ಪ್ರಕಾಶ್ ಅವರ ಧ್ವನಿಯಲ್ಲಿನ ಹಾಡುಗಳನ್ನು ಕೇಳಿದಾಗ, ಕುವೆಂಪು, ಕಾರಂತ, ಲಂಕೇಶ್, ತೇಜಸ್ವಿಯವರ ಬರವಣಿಗೆಯನ್ನು ಓದಿದಾಗ ಜೀವದಲ್ಲಿ ಚೈತನ್ಯ ಹೊಮ್ಮುತ್ತದೆ. ಇವರಲ್ಲಿ ಇರುವ ಸಮ್ಮೋಹಕ ಕನ್ನಡ ನಮಗೆ ಸಮಾಧಾನ, ನೆಮ್ಮದಿ ಕೊಡುತ್ತದೆ. 'ಉಳ್ಳವರು ಶಿವಾಲಯವ ಮಾಡುವರು ನಾನೇನು ಮಾಡಲಿ ಬಡವನಯ್ಯಾ' ಎಂದ ಬಸವಣ್ಣ ಇದುವರೆಗೆ ಉಳಿದದ್ದು, ಮುಂದೆಯೂ ಉಳಿಯುವುದು ಈ ಕನ್ನಡದಿಂದಾಗಿಯೇ. 'ಪಟ್ಟ ಪಾಡೆಲ್ಲವನ್ನು ಹುಟ್ಟು ಹಾಡಾಗಿಸುವ' ಬೇಂದ್ರೆ ತನ್ನ ಕಾಲವನ್ನೂ ದಾಟಿ ಮುಂದಕ್ಕೆ ಹೋಗುವುದು ಭಾಷೆಯನ್ನು, ಜನರನ್ನು ಜೀವಂತಗೊಳಿಸುವ ನುಡಿಗಟ್ಟಿನಿಂದಾಗಿಯೇ.



ಕಲೆ: ವಾಗೀಶ ಹೆಗಡೆ

ನಮ್ಮ ಭಾಷೆ ತಾಯಿಯಾಗುವುದು ಅದರ ಪೊರೆಯುವ, ಬೆಳೆಸುವ ಗುಣ ಮತ್ತು 'ಕನ್ನಡತನ'ದಿಂದ ಕೂಡ. ಹಲವು ಪ್ರದೇಶಗಳ ಅನೇಕ ಕನ್ನಡಗಳಿಂದಾಗಿ ಅದು ಸದಾ ಸೃಷ್ಟಿಯಾಗುತ್ತಿರುವ, ಬದಲಾಗುತ್ತಿರುವ ಭಾಷೆಯಾಗಿದೆ. ಅದು ಗಾಳಿಯಂತೆ ನಿಂತಲ್ಲಿ ನಿಲ್ಲದ ನಾಳೆಗೂ ಬದುಕುವ ಕನ್ನಡ.

ಈಚೆಗೆ ಬರುತ್ತಿರುವ ಸಾಹಿತ್ಯಕೃತಿಗಳಲ್ಲಿ ಈ 'ಕನ್ನಡತನ' ಇಲ್ಲವಾಗುತ್ತಿದೆ. ಅಂತಹ ಕೃತಿಗಳು ರಸ ಒಸರದ ಫಲಗಳಂತಿರುತ್ತವೆ. ಅವುಗಳಲ್ಲಿ ಅಚ್ಚಾಗಿದ್ದನ್ನು ಭಾಷೆ ಎನ್ನಬಹುದೇ ಹೊರತು ಅದನ್ನು ಕನ್ನಡ ಎನ್ನಲಾಗುವುದಿಲ್ಲ. ಅದರಲ್ಲೂ ಜನ ಬಳಕೆಯ ಕನ್ನಡ ಕಿವಿಮೇಲೆ ಬೀಳದಷ್ಟು ದೂರದಲ್ಲಿರುವ, ಭಾಷೆಯ ಜೈವಿಕ ಸ್ವರೂಪದ ಬಗ್ಗೆ ಅಲಕ್ಷ್ಯದಿಂದಿರುವ ಲೇಖಕರಲ್ಲಿ ಇದು ಹೆಚ್ಚಾಗಿ ಕಾಣುತ್ತದೆ. ಕೃತಿಯೊಂದರಲ್ಲಿ ಕವಿತೆ, ಕತೆ ಮಾತ್ರ ಸೃಷ್ಟಿಯಾಗುತ್ತಿರುವುದಿಲ್ಲ, ಜೊತೆಗೆ ಬಾಗು ಬಳುಕಿನ ಭಾಷೆಯೂ ರೂಪುಗೊಳ್ಳುತ್ತಿರುತ್ತದೆ. ಹಾಗೆಯೇ ಕನ್ನಡತನವೇ ಇಲ್ಲದ ಕೃತಿಗಳ ಆಯುಷ್ಯ ಎಷ್ಟು ಕಿರಿದು ಎನ್ನುವುದನ್ನು ಇಲ್ಲಿ ವಿವರಿಸಬೇಕಿಲ್ಲ. ಇದು ನಮ್ಮ ಏಕರೂಪಿ ಕನ್ನಡವನ್ನು ಬಳಸುವ ಸಿನಿಮಾ, ಟೀವಿ ಕಾರ್ಯಕ್ರಮಗಳಿಗೂ ಅನ್ವಯಿಸುತ್ತದೆ. ಹಲವು ಕಡೆಗಳ ನುಡಿಗನ್ನಡವನ್ನು ಬಳಸಿಕೊಂಡು ನಮ್ಮ ಲೇಖಕರು ಕೃತಿಗಳನ್ನು ರಚಿಸಿದರೆ ಅದಕ್ಕೆ ಬೇರೊಂದು ರುಚಿಯೇ ಬಂದೀತು.

ಈ ಬಾರಿ ಕತೆಗಾರ್ತಿ ಎಂ.ಎಸ್. ವೇದಾ ಅವರ ಸಂದರ್ಶನವಿದೆ. ಇತ್ತೀಚೆಗೆ ನಿಧನರಾದ ವಿಮರ್ಶಕ ಜಿ.ಎಸ್. ಆಮೂರ ಅವರ ಕುರಿತಂತೆ ಅವರ ಒಡನಾಡಿಗಳು ಮತ್ತು ವಿಮರ್ಶಕರಾದ ಎಚ್.ಎಸ್. ರಾಘವೇಂದ್ರರಾವ್, ಎಂ.ಜಿ. ಹೆಗಡೆ ಬರೆದ ಲೇಖನಗಳು ಈ ಸಂಚಿಕೆಯಲ್ಲಿವೆ.

**ಸಂದೀಪ ನಾಯಕ**